ಅ) ಅಂಗನವಾಡಿ ಕಾರ್ಯಕರ್ತೆಯರಿಗೆ ನಿವೃತ್ತಿ ಸಮಯದಲ್ಲಿ ಸರ್ಕಾರ ನಿವೃತ್ತಿಧನವಾಗಿ ತಲಾ ರೂ 50,000 ಕೊಡುವುದೆ,

ಆ) ಹಾಗಿದ್ದಲ್ಲಿ ಈ ಬಗ್ಗೆ ಆದೇಶವನ್ನು ಯಾವಾಗ ಹೊರಡಿಸಲಾಗುವುದು?

ಶ್ರೀ ಹೆಚ್ ಕೆ ಕುಮಾರಸ್ವಾಮಿ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ ಮತ್ತು ಆ) ಈ ಬಗ್ಗೆ ನೆರೆ ರಾಜ್ಯಗಳಲ್ಲಿ ನೀಡುತ್ತಿರುವ ಸೌಲಭ್ಯ ಹಾಗೂ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಸಂಘಗಳಿಂದ ಅಭಿಪ್ರಾಯ ಪಡೆದಿದ್ದು ಪ್ರಸ್ತಾವನೆ ಪರಿಶೀಲನೆಯಲ್ಲಿದೆ

901(1290) ಶ್ರೀ ಲಾಲಾಜಿ ಆರ್ ಮೆಂಡನ್ (ಕಾಪು) ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾಮ ದೀಪಸ್ತಂಬವನ್ನು ಕಡಲ ತೀರವನ್ನೊಳಗೊಂಡಂತೆ ಪ್ರವಾಸೋದ್ಯಮವಾಗಿ ಅಭಿವೃದ್ಧಿ ಮಾಡಲು ಸರ್ಕಾರ ಯಾವ ರೀತಿಯ ನಕ್ಷೆಯನ್ನು ತಯಾರಿಸಿದೆ,

ಆ) ಈ ನಕ್ಷೆಯಂತೆ ಕಾರ್ಯಗತ ಮಾಡಲು ಕಾದಿರಿಸಿರುವ ಅನುದಾನವೆಷ್ಟು,

ಇ) ಈ ಸಾಲಿನ ಕಾಮಗಾರಿಗಾಗಿ ಬಿಡುಗಡೆಯಾದ ಅನುದಾನವೆಷ್ಟು?

ಶ್ರೀ ಬಿ ಶ್ರೀರಾಮುಲು (ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

ಅ) ಪ್ರವಾಸೋದ್ಯಮ ಇಲಾಖೆಯು ಕಾಮ ದೀಪಸ್ತಂಬದ / ಕಡಲ ತೀರದ ಅಭಿವೃದ್ಧಿ ಮಾಡುವ ಕಾರ್ಯವನ್ನು ತೆಗೆದುಕೊಂಡಿರುವುದಿಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

899(1164) ಶ್ರೀ ಲಾಲಾಜಿ ಆರ್ ಮೆಂಡನ್ (ಕಾಮ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಒಟ್ಟು ಉತ್ಪಾದನೆಯಾಗುವ ವಿದ್ಯುತ್ ಪ್ರಮಾಣವೆಷ್ಟು,

ಆ) ಇದರಲ್ಲಿ ನಿಖರವಾಗಿ ಬಳಕೆಯಾಗುವ ವಿದ್ಯುತ್ ಪ್ರಮಾಣವೆಷ್ಟು,

ಇ) ವಿದ್ಯುತ್ ಸೋರಿಕೆಯ ನಿಯಂತ್ರಣಕ್ಕೆ ಅನುಸರಿಸುವ ಸ್ವದೇಶಿ ಮತ್ತು ವಿದೇಶಿ ತಂತ್ರಜ್ಞಾನ ಯಾವುದು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) 2005–06ನೇ ಸಾಲಿನಲ್ಲಿ ರಾಜ್ಯದ ಆಂತರಿಕ ಉತ್ಪಾದನೆಯೂ ಸೇರಿದಂತೆ ವಿವಿಧ ಮೂಲಗಳಿಂದ ರಾಜ್ಯಕ್ಕೆ ಲಭ್ಯವಾದ ವಿದ್ಯುತ್‌ನ ಪ್ರಮಾಣ 34,258 ದಶಲಕ್ಷ ಯೂನಿಟ್ಟುಗಳು

ಆ) ಇದರಲ್ಲಿ ನಿಖರವಾಗಿ ಬಳಕೆಯಾದ ವಿದ್ಯುತ್‌ನ ಪ್ರಮಾಣ 24,053 ದಶಲಕ್ಷ ಯೂನಿಟ್ಟುಗಳು

ಇ) ವಿದ್ಯುತ್ ಸೋರಿಕೆಯ ನಿಯಂತ್ರಣಕ್ಕೆ ಸ್ವದೇಶಿ ತಂತ್ರಜ್ಞಾನವನ್ನೆ ಅನುಸರಿಸಲಾಗುತ್ತಿದ್ದು, ಎಲ್ಲಾ ಆಧುನಿಕ ತಂತ್ರಜ್ಞಾನಗಳನ್ನು ಬಳಸಿಕೊಳ್ಳಲಾಗುತ್ತಿದೆ

ತಾಂತ್ರಿಕ ನಷ್ಟವನ್ನು ಕಡಿಮೆಗೊಳಿಸಲು ಕೈಗೊಳ್ಳಲಾಗುತ್ತಿರುವ ಕ್ರಮಗಳು –

1 ಹೊಸ ವಿದ್ಯುತ್ ಸಬ್–ಸ್ಟೇಷನ್‌ಗಳ ಮತ್ತು ಪ್ರಸರಣ ಮಾರ್ಗಗಳ ನಿರ್ಮಾಣ

2 ವಿದ್ಯುತ್ ಸಬ್–ಸ್ಟೇಷನ್‌ಗಳಲ್ಲಿ ಕೆಪಾಸಿಟರ್ ಬ್ಯಾಂಕ್‌ಗಳ ಅಳವಡಿಕೆ

3 ವಿತರಣ ವ್ಯವಸ್ಥೆಯಲ್ಲಿ ಹೆಚ್ಚುವರಿ ವಿತರಣ ಟ್ರಾನ್ಸ್‌ಫಾರ್ಮರ್‌ಗಳ ಅಳವಡಿಕೆ, 11 ಕೆ ವಿ ಎಕ್ಸ್‌ಪ್ರೆಸ್ ಫೀಡರ್‌ಗಳ ನಿರ್ಮಾಣ, 11 ಕೆ ವಿ ಲಿಂಕ್ ಲೈನ್‌ಗಳ ನಿರ್ಮಾಣ, ಕಡಿಮೆ ಗಾತ್ರದ ವಿದ್ಯುತ್ ವಾಹಕಗಳನ್ನು ಹೆಚ್ಚಿನ ಗಾತ್ರದ ವಿದ್ಯುತ್ ವಾಹಕಗಳ ಮೂಲಕ ಬದಲಾಯಿಸುವುದು ಮುಂತಾದ ವ್ಯವಸ್ಥೆ ಸುಧಾರಣೆ ಕಾರ್ಯಗಳನ್ನು ನಿರ್ವಹಿಸುವುದು

4 ಕೇಂದ್ರ ಸರ್ಕಾರದ ಎ ಪಿ ಡಿ ಆರ್ ಪಿ ಯೋಜನೆಯಡಿಯಲ್ಲಿ ಉಪ ಪ್ರಸರಣ ಮತ್ತು ವಿತರಣ ವ್ಯವಸ್ಥೆಯ ನವೀಕರಣ ಮತ್ತು ಬಲಪಡಿಸುವಿಕೆ ಕಾರ್ಯಗಳು

ವಾಣಿಜ್ಯ ನಷ್ಟವನ್ನು ಕಡಿಮೆಗೊಳಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ

1 ಹೈ ಪ್ರಿಸಿಷನ್ ವಿದ್ಯುತ್ ಮೀಟರ್‌ಗಳನ್ನು ಹಾಗೂ ಎಲೆಕ್ಟ್ರಾನಿಕ್ ಮೀಟರ್‌ಗಳನ್ನು ಅಳವಡಿಸಲಾಗುತ್ತಿದೆ

2 ಮಾಪಕ ರಹಿತ ಸ್ಥಾವರಗಳಿಗೆ "ಯೂನಿವರ್ಸಲ್ ಮೀಟರಿಂಗ್ ಕಾರ್ಯಕ್ರಮ" ದಡಿ ಮಾಪಕಗಳನ್ನು ಅಳವಡಿಸಲಾಗುತ್ತಿದೆ

3 ನಗರ ಪ್ರದೇಶಗಳಲ್ಲಿ ವಿದ್ಯುತ್ ಕಳ್ಳತನಕ್ಕೆ ಹೆಚ್ಚಿನ ಅವಕಾಶಗಳು ಇರುವುದರಿಂದ ನಗರ ಪ್ರದೇಶಗಳಲ್ಲಿನ ವಿತರಣಾ

ಟ್ರಾನ್ಸ್‌ಫಾರ್ಮರ್‌ಗಳಲ್ಲಿ ಮಾಪಕಗಳನ್ನು ಅಳವಡಿಸಿ, ವಿತರಣಾ ಟ್ರಾನ್ಸ್‌ಫಾರ್ಮರ್‌ವಾರು ಎನರ್ಜಿ ಆಡಿಟ್‌ನ್ನು ಕಟ್ಟುನಿಟ್ಟಾಗಿ ಕೈಗೊಳ್ಳಲಾಗುತ್ತಿದೆ ಹೆಚ್ಚಿನ ನಷ್ಟ ಹೊಂದಿರುವ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳಿಂದ ವಿದ್ಯುತ್ ಸರಬರಾಜು ಪಡೆಯುವ ವಿದ್ಯುತ್ ಗ್ರಾಹಕರ ವಿರುದ್ಧ ಜಾಗೃತ ದಳವು ವಿಶೇಷ ಗಮನವನ್ನು ಹರಿಸಿ, ವಿದ್ಯುತ್ ಕಳ್ಳತನದ ಪ್ರಕರಣಗಳನ್ನು ಪತ್ತೆ ಹಚ್ಚುತ್ತಿದೆ

4 ವಾಣಿಜ್ಯ ಮತ್ತು ಕೈಗಾರಿಕೆಗಳ ಸ್ಥಾವರಗಳಲ್ಲಿ ಸಾಮಾನ್ಯವಾಗಿ ವಿದ್ಯುತ್ ಕಳ್ಳತನ ಸಂಭವಿಸುವ ಪ್ರಮೇಯಗಳು ಹೆಚ್ಚಾಗಿರುವುದರಿಂದ ವಾಣಿಜ್ಯ ಮತ್ತು ಕೈಗಾರಿಕೆಗಳ ಸ್ಥಾವರಗಳ ಬಗ್ಗೆ ಹೆಚ್ಚಿನ ನಿಗಾವನ್ನು ವಹಿಸಲಾಗುತ್ತಿದೆ

5 ಜಾಗೃತ ದಳದ ಘಟಕಗಳನ್ನು ಪೊಲೀಸ್ ಠಾಣೆಗಳೆಂದು ಘೋಷಿಸಲಾಗಿದ್ದು, ವಿತರಣಾ ಕಂಪನಿಗಳ ಪೊಲೀಸ್ ಅಧಿಕಾರಿಗಳೇ ವಿದ್ಯುತ್ ಕಳವು ಪ್ರಕರಣಗಳಲ್ಲಿ ಕೇಸು ದಾಖಲಿಸಿ ತನಿಖೆ ಮಾಡುವ ಅಧಿಕಾರವನ್ನು ಹೊಂದಿರುತ್ತಾರೆ

6 ವಿದ್ಯುತ್ ಕಳ್ಳತನ ವಿರೋಧಿ ಕಾನೂನು ಬಲಪಡಿಸಲಾಗಿದ್ದು ಇದನ್ನು 10-4-2002ರಿಂದ ಕಟ್ಟುನಿಟ್ಟಾಗಿ ಜಾರಿ ಗೊಳಿಸಲಾಗಿರುತ್ತದೆ

7 ಬಿಲ್ಲಿಂಗ್ ವ್ಯವಸ್ಥೆಯನ್ನು ಗಣಕೀಕರಣಗೊಳಿಸಲಾಗಿದ್ದು, ಮಾನವ ಹಸ್ತಕ್ಷೇಪವನ್ನು ತಡೆಗಟ್ಟಲಾಗುತ್ತಿದೆ

902(581) ಡಾ ಮಹದೇವಪ್ಪ ಹೆಚ್ ಸಿ (ಟಿ ನರಸೀಪುರ) ಮಾನ್ಯ ಒಳಾಡಳಿತ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ದಲಿತರ ಮೇಲೆ ನಡೆಯುತ್ತಿರುವ ದೌರ್ಜನ್ಯ ಪ್ರಕರಣಗಳು ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳೇನು,

ಇ) ದೌರ್ಜನ್ಯಕ್ಕೆ ಒಳಗಾದ ದಲಿತ ಕುಟುಂಬಗಳಿಗೆ ಸರ್ಕಾರದಿಂದ ರಕ್ಷಣೆ ನೀಡಲಾಗಿದೆಯೇ,

ಈ) ಹಾಗಿದ್ದಲ್ಲಿ, ಯಾವ ರೀತಿಯಲ್ಲಿ ರಕ್ಷಣೆ ನೀಡಲಾಗಿದೆ,